# ೨೨

# “ಆದರೆ ನಾನು ನಿಮಗೆ ಹೇಳುತ್ತೇನೆ”

## (ಪರ್ವತ ಪ್ರಸಂಗ 1)

### ಓದುವ ಮನೆಪಾಠ #8

V. ಎರಡನೇ ಪಸ್ಕದಿಂದ, ಮೂರನೆಯದಕ್ಕೆ (ಮುಂದುವರೆಯುವದು).
   F. ಪರ್ವತ ಪ್ರಸಂಗ.
      1. ಪರಿಚಯ (ಮತ್ತಾಯ 5:1, 2; ಲೂಕ 6:17-20).
      2. ಪರ್ವತ ಪ್ರಸಂಗ ಮಸ್ಸೀಯನ ಕುರಿತ ಪ್ರವಾದನೆ (ಮತ್ತಾಯ 5:3-12; ಲೂಕ 6:20-26).
      3. ಮೆಸ್ಸಿಯನ ಸಂದೇಶದ ಪರಿಣಾಮ (ಮತ್ತಾಯ 5:13-16).
      4. ಹಳೆ ಒಡಂಬಡಿಕೆಯ ಬೋಧನೆಗಳು ಹಾಗೂ ಮೆಸ್ಸಿಯನ ಬೋಧನೆಗಳು ಇರುವ ಸಂಬಂಧ - ಹಳೆ ಒಡಂಬಡಿಕೆಯ ಬೋಧನೆಗನುಗುಣವಾಗಿ, ಮನುಷ್ಯ ನಿಮಿತ್ತ ಸಂಪ್ರದಾಯಗಳು (ಮತ್ತಾಯ 5:17-48; ಲೂಕ 6:27-30, 32-36).
      5. ಧಾರ್ಮಿಕ ಕಾರ್ಯವೇ ಹೃದಯಪೂರ್ವಕವಾಗಿರಬೇಕು ಹೊರತು ತೋರಿಕೆಯದಾಗಿರಬಾರದು (ಮತ್ತಾಯ 6:1-18).

### ಪೀಠಿಕೆ

ನಮ್ಮ ಹಿಂದಿನ ಪಾಠವು ಮುಗಿಯುತ್ತಿದ್ದಂತೆಯೇ, ಯೇಸು ತನ್ನ ಮರಣದ ನಂತರ ತನ್ನ ಕಾರ್ಯವನ್ನು ಮುನ್ನಡೆಸಲು ಜನರನ್ನು ಆರಿಸಿಕೊಂಡನು. ಮೆಸ್ಸೀಯನ ರಾಜ್ಯದಲ್ಲಿನ ಜನರು ಅಪೇಕ್ಷಿಸುವಂತಹ ಸಮಗ್ರ ಬೋಧನೆಯನ್ನು ನೀಡುವುದಕ್ಕಾಗಿ ಅವರನ್ನು ಸಿದ್ಧಪಡಿಸುವದು ಆತನ ಮೂಲ ಕಾರ್ಯವಾಗಿತ್ತು. ಇದನ್ನು ನಾವು “ಪರ್ವತ ಪ್ರಸಂಗ” ಎಂದು ಬಲ್ಲವರಾಗಿದ್ದೇವೆ.

ಈ ಯೋಜನಾಬದ್ಧ ಮಂಡನೆಯನ್ನು ಕೇಳುವ ಅವಕಾಶವನ್ನು ಅನೇಕರು ಹೊಂದಿದ್ದಾರೆ (ಮತ್ತಾಯ 5:1; 7:28; ಲೂಕ 6:17; 7:1), ಆದರೆ ಇದು ನಿರ್ದಿಷವಾಗಿ ಯೇಸುವಿನ ಶಿಷ್ಯರನ್ನು ನಿರ್ದೇಶಿಸುವುದಾಗಿದೆ (ಮತ್ತಾಯ 5:1, 2; ಲೂಕ 6:20). ಇದು ಹೊಸದಾಗಿ ನೇಮಿಸಲಾದ ಅಪೊಸ್ತಲರಿಗೆ ಇದು ತರಬೇತಿಯ ಅವಧಿಯಂತೆ ಇತ್ತು ಎಂದು ನಾವು ಯೋಚಿಸಬಹುದು.

ದೇವರ ರಾಜ್ಯ ಪ್ರಜೆಗಳಾಗಲು ಈ ಪ್ರಬೋಧನೆಯು ಪ್ರೇರೇಪಿಸುವುದಾಗಿದೆ (ನೋಡಿರಿ ಮತ್ತಾಯ 5:3-6; 6:33; 7:21, 24-27). *ಈಗಾಗಲೇ* ಯೇಸುವಿನ ಹಿಂಬಾಲಕನಾಗಿದ್ದವನು ಹೇಗೆ ನಡೆದುಕೊಳ್ಳಬೇಕು ಎಂಬುದನ್ನು ಇದು ಒಳಗೊಂಡಿರುತ್ತದೆ.

ಈ ಪ್ರಸಂಗವನ್ನು ನೀನು ಅಧ್ಯಯನ ಮಾಡುತ್ತಿರುವಂತೆಯೇ, ಯೆಹೂದಿಗಳ ವಿಮೋಚನಕಾಲದಲ್ಲಿ ಯೇಸು ಯೆಹೂದಿ ವೀಕ್ಷಕರನ್ನು ಉದ್ದೇಶಿಸಿ ಮಾತನಾಡಿದನು. ಹೀಗೆ ಆತನು ಯೆಹೂದಿ ನ್ಯಾಯಾಲವನ್ನು (ಸೆನ್ಹೆದ್ರಿನ್) ಸೂಚಿದನು (ಮತ್ತಾಯ 5:22), ಮತ್ತು (ದೇವ) ನಗರಿಯಾದ “ಯೆರೂಸಲೇಮಿಗೆ” (ಮತ್ತಾಯ 5:35) ಯಜ್ಞವೇದಿಯ ಮೇಲೆ ಬಲಿಯಾಗಿ ಇಡಲ್ಪಟ್ಟನು (ಮತ್ತಾಯ 5:23). ಹೇಗೋ ಈ ವಾಕ್ಯಗಳು ಯೇಸುವಿನ ಹೊಸ

ಒಡಂಬಡಿಕೆಯ ಭಾಗಗಳಾಗಿ ಎತ್ತಿಡಲ್ಪಟ್ಟವುಗಳು ಆಗಿವೆ; ಹೀಗೆ ಮನವಿಯನ್ನು ಮಾಡುವಾಗ, ಕ್ರಿಸ್ತೀಯ ಅಂಶಗಳಿಗೆ ಪಾಲಿಭಾಷಿಕೆಯನ್ನು ಎರವಲ ಪಡೆಯುವದು ನಮಗೆ ಅವಶ್ಯವಿದೆ. (ಉದಾಹರಣೆಗೆ "ನಿನ್ನ ಕಾಣಿಕೆಯನ್ನು ಯಜ್ಞವೇದಿಯ ಬಳಿಗೆ ತರುವಾಗ" [5:23] ಎಂಬುದು "ನೀನು ದೇವರನ್ನು ಆರಾಧಿಸಲು ಬರುವಾಗ" ಎಂಬ ವಿಚಾರವನ್ನು ಸೂಚಿಸುವುದಾಗಿದೆ.)

ಈ ಪ್ರಸಂಗದಲ್ಲಿ ಚೆನ್ನಾಗಿ ತಿಳಿದಿರುವ ಅಂಶವು ಮತ್ತಾಯ 5-7ರಲ್ಲಿ, ನಮಗೆ ಸಿಕ್ಕುವುದಾಗಿದೆ, ಆದರೆ ಈ ಚಿಕ್ಕ ವಿವರವು ಲೂಕ 6:20-49ರಲ್ಲಿ ಕಂಡು ಬರುವುದಾಗಿದೆ. ಎರಡೂ ವಿವರಣೆಗಳಲ್ಲಿ ಭಿನ್ನತೆಗಳು ಇವೆ. ಉದಾಹರಣೆಗೆ, ಮತ್ತಾಯನ ಸುವಾರ್ತೆಯಲಿಲ 107 ವಚನಗಳು ಇದ್ದಾರೆ ಲೂಕನ ಸುವಾರ್ತೆಯಲ್ಲಿ 30 ವಚನಗಳು ಇವೆ, ಮತ್ತು ಅಲ್ಲಲ್ಲಿ ಪದಗಳಲ್ಲಿ ಭಿನ್ನತೆಯು ಇದೆ. ಈ ನಿರ್ಧಿಷ್ಟವಾದ ಭಿನ್ನತೆಯ ಬಗೆಗೆ ನಾನು ಹೆಚ್ಚಿನ ಗಮನ ನೀಡಲಾರೆನು. ಮತ್ತಾಯನು ಉದ್ದನೆಯ ವಿವರಗಳನ್ನು ಕೊಡುತ್ತಾನೆ. ಲೂಕನು ಅದೇ ಪಾಠಕ್ಕೆ[1] ಚಿಕ್ಕ ವಿವರಗಳನ್ನು ಹಾಗೂ ವೈಯಕ್ತಿಕ ಸಾಕ್ಷಿಯಾಗಿಲು ಬಯಸುವವರಿಗೆ ಸ್ವಲ್ಪ ವಿಭಿನ್ನವಾದ ಪದಗಳನ್ನು ಕೊಡುತ್ತಾನೆ.[2] (ಮತ್ತಾಯ ಮತ್ತು ಲೂಕರಿಬ್ಬರೂ ಯೇಸು ಹೇಳಿದ್ದಕ್ಕೆ ವಿವರಣೆಯನ್ನು ಕೊಟ್ಟಿದ್ದಾರೆ ಹೊರತು ಅಲ್ಲಿ ಮಾತಾಡಲ್ಪಟ್ಟ ಪ್ರತಿಯೊಂದು ಮಾತಿಗೆ ಅಲ್ಲ ಎಂದು ಹೆಚ್ಚಿನವರು ಒಪ್ಪುವವರಾಗಿದ್ದಾರೆ.[3])

ವಿದ್ಯಾರ್ಥಿಗಳ ಬಗೆಗೆ ಹೆಚ್ಚಿನ ಕಾಳಜಿಯನ್ನು ಹೊಂದಿರುವಂಥದ್ದೆಂದರೆ, ಮತ್ತಾಯನ ಪ್ರಕಾರ, ಯೇಸು ತಾನು ಬೋಧಿಸುವುದಕ್ಕಿಂತ ಮುಂಚೆ "ಬೆಟ್ಟನ್ನೇರಿದನು ಕೂತುಕೊಂಡನು" (ಮತ್ತಾಯ 5:1) ಎಂದನು. ಇದಕ್ಕೆ ವ್ಯತ್ಯಾಸವಾಗಿ, ಯೇಸು ತನ್ನ ಬೋಧನೆಯ ಪೂರ್ವದಲ್ಲಿ ಆತನು "ಸಮಭೂಮಿಯಲ್ಲಿ ನಿಂತನು" (ಲೂಕ 6:17) ಎಂದು ಲೂಕನು ಬರೆಯುತ್ತಾನೆ. ಎರಡನ್ನೂ ಪರಿಗಣಿಸುವದು ಅಸಾಧ್ಯವಾದದ್ದಾಗಿದೆ. ಬೆಟ್ಟದ ತಳದಲ್ಲಿನ ಸಮಭೂಮಿಯಲ್ಲಿ ನಿಂತುಕೊಂಡು ಯೇಸು ಮೊದಲು ಜನಸಮೂಹವನ್ನು ಸ್ವಸ್ಥಮಾಡಿರಬಹುದು (ಲೂಕ 6:12, 17-19), ಮತ್ತು ಅಲ್ಲಿಯೇ ಹತ್ತಿರದಲ್ಲಿರುವ ಬೆಟ್ಟದೆಡೆಗೆ ಸಾಗಿರಬಹುದು ಮತ್ತು ಸ್ವಲ್ಪ ಅಂತರದಲ್ಲಿ ಕೇಳುತ್ತಾ ಉಳಿದ ಜನಸಮೂಹದೊಡನೆ ತನ್ನ ಶಿಷ್ಯರಿಗೆ ಬೋಧಿಸಲು ಕೂತುಕೊಂಡಿರಬಹುದು. ಜೆರೋಮನ ಪ್ರಕಾರ (ಆದಿಕಾಲದ ಸ್ತ್ರೀಯ ಲೇಖಕ) ಆತನ ಕಾಲದಲ್ಲಿ ಅಂದರೆ ಜನರು ಕೂಡಿಬರುತ್ತಿದ್ದ ಸಮತಟ್ಟಾದ ಭೂಮಿಯಲ್ಲಿ ಬೆಟ್ಟದ ಮೇಲೆ ಬೋಧಿ ಸಲ್ಪಡುತ್ತಿದ್ದನು Horns of Hattin,[4] ಎಂದು ಕರೆಯಲ್ಪಡುತ್ತಿತ್ತು ಎಂದು ಸಾಮಾನ್ಯ ವಾಗಿ ಯೋಚಿಸುವವರಾಗಿದ್ದರು.

ಮತ್ತಾಯ ಮತ್ತು ಲೂಕರಲ್ಲಿನ ಪ್ರಸಂಗಗಳ ಸತ್ಯಾಂಶವೆಂದೆರೆ ಇವೆರಡೂ ಒಂದೇ ರೀತಿ ಯಲ್ಲಿ ಪ್ರಾರಂಭವಾಗುತ್ತವೆ (ಮತ್ತಾಯ 5:3-12; ಲೂಕ 6:20-23), ಕೊನೆಯೂ ಒಂದೇ ರೀತಿಯಲ್ಲಿ ಆಗುತ್ತದೆ (ಮತ್ತಾಯ 7:24-27; ಲೂಕ 6:47-49), ಮತ್ತು ಮಧ್ಯದಲ್ಲಿ[5] ಒಂದೇ ಸಾಮಾನ್ಯ ರೀತಿಯನ್ನು ಅನುಸರಿಸುವಂತದ್ದು ಎರಡೂ ಪ್ರಸಂಗಗಳು ಒಂದೇ ರೀತಿಯವು ಆಗಿವೆ ಎಂದು ನಂಬುವತ್ತ ನಮ್ಮನ್ನು ನಡೆಸುತ್ತವೆ. ಬಲು ಮುಖ್ಯವಾದದ್ದೆಂದರೆ ಅವು ಇರುವವು ಅಥವಾ ಇಲ್ಲವೋ ಎಂಬುದು ಇಲ್ಲಿ ಪ್ರಮುಖವಾಗಿಲ್ಲ. ಅವುಗಳ ಒಂದೇ ಪ್ರಸಂಗವಾಗಿಲ್ಲದ್ದಾದರೆ ಸುಮಾರು ಅದೇ ಮೂಲ ವೀಕ್ಷಕರಿಗೆ ಅದೇ ಅವಧಿಯ[6] ಆರಂಭದಲ್ಲಿ ಬೋಧಿಸಲ್ಪಟ್ಟ ಒಂದೇ ರೀತಿಯ ಪ್ರಸಂಗವಾಗಿಲ್ಲರಬಹುದು.[7] ಈ ಕಾರಣಕ್ಕಾಗಿ ಇವುಗಳು ಜೊತೆಜೊತೆಯಾಗಿ ಓದಲ್ಪಡುತ್ತವೆ - ಮತ್ತು ಅದನ್ನೇ ನಾವೀಗ ಮಾಡುತ್ತಿರುವದು.[8] ಮತ್ತಾಯನ ವಿವರಣೆಯು ಚೆನ್ನಾಗಿ ಪರಿಚಿತವಿರುವುದರಿಂದಲೂ ಮತ್ತು ಸಮಗ್ರವಾಗಿರುವುದರಿಂದಲೂ, ಆ ಅಂಶವನ್ನೇ ನಾವು ನಮ್ಮ ಮೂಲ ಆಧಾರವಾಗಿ ಬಳಸುವವರಾಗಿದ್ದೇವೆ ಮತ್ತು ಲೂಕನ ವಿವರಣೆಯು ಪೂರಕ ಆಧಾರವಾಗಿ ಬಳಸುವವರಾಗಿದ್ದೇವೆ.

ಈ ಪ್ರಸಂಗದಲ್ಲಿನ ಶ್ರೇಷ್ಟ ಸತ್ಯಗಳಿಗೆ ಮತ್ತು ಪ್ರತಿಯೊಂದು ಸಂಕೀರ್ಣ ಹೇಳಿಕೆ ಗಳಿಗೆ ನಾವು ವಿವರಣೆಯನ್ನು ಕೊಡುವುದಿಲ್ಲ. ಹೇಗೋ, ಈ ಪಾಠದಲ್ಲಿ ಹಾಗೂ ಮುಂದಿನ

ಪಾಠದಲ್ಲಿ ಸಾಟಿಯಿಲ್ಲದ ಮಂಡನೆಯ ಪೂರ್ಣವಾದ ವ್ಯಾಪ್ತಿಯನ್ನು ನಾವು ತೋರಿಸಲು ಪ್ರಯತ್ನಿಸುವವರಾಗಿದ್ದೇವೆ.

## "ನೀವು ಧನ್ಯರು ..." (ಮತ್ತಾಯ 5:3-12; ಲೂಕ 6:20-26)

ಈ ಪ್ರಸಂಗವು "ಧನ್ಯರು" ಎಂಬ ಹೇಳಿಕೆಗಳ ಸರಣಿಯಿಂದ ಪ್ರಾರಂಭವಾಗುತ್ತದೆ. ಇವೆಲ್ಲವುಗಳು "ಧನ್ಯತೆಗಳು" ಎಂದು ಕರೆಯಲ್ಪಡುವವುಗಳು ಆಗಿವೆ. ಈ ಶೀರ್ಷಿಕೆಯು ಬೈಬಲ್‌ನ ಲ್ಯಾಟಿನ್ ಭಾಷಾಂತರದಿಂದ ಬಂದದ್ದಾಗಿದ್ದು ಪ್ರತಿಯೊಂದು ವಾಕ್ಯದ ಮೊದಲಲ್ಲಿ ಬರುವ; ಲ್ಯಾಟಿನ್‌ನಲ್ಲಿ ಈ ಪದಕ್ಕಾಗಿ "ಆಶೀರ್ವಾದ ಪ್ರದರು" ಅಥವಾ "ಸಂತೋಷ" ಎಂಬುದಾಗಿದೆ.

ಈ ಪರ್ವತ ಪ್ರಸಂಗವನ್ನು ಓದುವ ಯಾರಿಗೆ ಆಗಲಿ, ಯೇಸುವನ್ನು ಹಿಂಬಾಲಿಸುವದು ಸರಳವಾದ ಸಂಗತಿಯಲ್ಲ ಎಂದು ನಿಶ್ಚಿತವಾಗುತ್ತದೆ (ಮತ್ತಾಯ 5:10-12). ಅಂತೆಯೇ ಕ್ರಿಸ್ತನು, ತನ್ನ ಮಾತುಗಳನ್ನು ಜನರು ಕೇಳಿ ಮತ್ತು ಅದರಂತೆ ನಡೆದದ್ದಾದರೆ ಹೇಗೆ ಆಶೀರ್ವಾದ ಹೊಂದುವವರು ಎಂಬ ಪ್ರೋತ್ಸಾಹದಾಯಕವಾದ ಗಣನೆಗೆ ತರುವ ಮಾತುಗಳಿಂದ ಪ್ರಾರಂಭಿಸುತ್ತಾನೆ (ನೋಡಿರಿ 7:24, 25). ಕೆಲ ಸಂಗತಿಗಳಲ್ಲಂತೂ ನಂಬಿಗಸ್ತರಾದ ಶಿಷ್ಯರು ಈ ಜೀವಿತದಲ್ಲಿಯೇ ಈ ಆಶೀರ್ವಾದಗಳನ್ನು ಆನಂದಿಸುವವರಾಗಿದ್ದಾರೆ ಆದರೆ ಅವರ ಪೂರ್ಣ ಅರಿವು ಮುಂದಿನ ಜೀವಿದಲ್ಲಿ ತೋರಿಬರುವುದಾಗಿದೆ. ಯೇಸುವಿಗೆ ಯಾರು ತಮ್ಮನ್ನು ಒಳಪಡಿಸುವುದಕ್ಕೆ ಮನಸ್ಸು ಮಾಡುವುದಿಲ್ಲವೋ ಅಂತವರ ಮೇಲೆ ಬರುವ ಸಂಕಟಗಳನ್ನುಲೂಕ ವಿವರಣೆಗಳು ಒಳಗೊಂಡಿದೆ (ಲೂಕ 6:24-26[9]).

## "ನೀವು ಆಗಿದ್ದೀರಿ ..." (ಮತ್ತಾಯ 5:13-16)

ಧನ್ಯತೆಗಳು ಯೇಸುವವನ್ನು ಅನುಸರಿಸುವವುಗಳಲ್ಲಿ ಅಸ್ತಿತ್ವ ಹೊಂದಿದ್ದ ಆತನ ಹಿಂಬಾಲಕರಿಗೆ ಆಶೀರ್ವಾದಗಳನ್ನು ತರುವಂತವುಗಳು ಆಗಿವೆ. "ನೀವು ಭೂಮಿಗೆ ಉಪ್ಪಾಗಿ" ಮತ್ತು "ಲೋಕಕ್ಕೆ ಬೆಳಕಾಗಿ" ಇದ್ದೀರಿ ಎಂದು ಆತನು ಶಿಷ್ಯರಿಗೆ ಮಾತನಾಡಿದಂತೆ ಆತನ ಚಿತ್ತವನ್ನು ನೆರವೇರಿಸುವದೂ ಸಹ ಇತರರನ್ನು ಆಶೀರ್ವದಿಸುವುದಾಗಿದೆ ಎಂದು ಕ್ರಿಸ್ತನು ಮುಂದೆ ಘೋಷಿಸುವವನಾಗಿದ್ದಾನೆ. ಬೈಬಲಿನಲ್ಲಿಯ ಅನೇಕ ಪರಿಚ್ಛೇದಗಳು ಶಕ್ತಿಯ ಮೇಲೆ ಮತ್ತು ಪ್ರಭಾವದ ಮಹತ್ವದ ಮೇಲೆ ಬೋಧಿಸುವವುಗಳು ಆಗಿವೆ (ಉದಾಹರಣೆಗಾಗಿ, ಜ್ಞಾನೋಕ್ತಿ 27:17; ಹೋಶೇಯ 4:9; 1 ಕೊರಿಂಥ 5:6; 15:33; ಪಿಲಿಪ್ಪಿ 2:15; 1 ಪೇತ್ರ 2:12), ಆದರೆ ಮತ್ತಾಯ 5:13-16 ರಲ್ಲಿರವುದಕ್ಕಿಂತ ಹೆಚ್ಚು ಸವಾಲುಯುಕ್ತವಾದದ್ದೂ ಮತ್ತು ವಿಚಾರವನ್ನು ಹೊಡೆದೆಬ್ಬಿಸುವದೂ ಯಾವದೂ ಇಲ್ಲ.[10]

## "ನೀವು ಕೇಳಿದ್ದೀರಿ ..." (ಮತ್ತಾಯ 5:17-48; ಲೂಕ 6:27-30, 32-36)

ಮತ್ತಾಯ 5:17-48ರಲ್ಲಿನ ಪರ್ವತ ಪ್ರಸಂಗದ ಮೇಲಿನ ಈ ಉದ್ದನೆಯ ಭಾಗದಲ್ಲಿ, ಯೇಸುವಿನ ಬೋಧನೆಯು ಮೋಶೆಯ ಧರ್ಮಶಾಸ್ತ್ರಕ್ಕೆ ಹೋಲಿಸಲ್ಪಟ್ಟಿದೆ ಮತ್ತು ಮಾನವ ನಿರ್ಮಿತ ಸಂಪ್ರದಾಯಗಳಿಗೆ ಜೋಡಿಸಲ್ಪಟ್ಟಿದೆ. ಧರ್ಮಶಾಸ್ತ್ರದೊಂದಿಗಿನ ಕ್ರಿಸ್ತನ ಸಂಬಂಧ ಮತ್ತು ಧರ್ಮಶಾಸ್ತ್ರದ ಮೇಲೆ ಜನರಿಂದ ಬಿಗಿಯಾದ ಹಿಡಿತಕ್ಕೊಳಗಾದ ಸಂಪ್ರದಾಯಗಳ ಬಾಹುಳ್ಯತೆಯ ಬಗೆಗೆ ಆತನ ಭಾವನೆಗಳನ್ನು ಆತನ ಶಿಷ್ಯರು ಸ್ಪಷ್ಟವಾಗಿ ಅರಿತುಕೊಳ್ಳುವದು ಅವಶ್ಯವಾಗಿತ್ತು.

ಯೇಸುವಿನ ಪೀಠಿಕಾತ್ಮಕವಾಗಿ ಇರುವ ಈ ಹೇಳಿಕೆಯು ಮಹತ್ವವಾದದ್ದು ಆಗಿದೆ,

> ಮೋಶೆಯ ಧರ್ಮಶಾಸ್ತ್ರವನ್ನಾಗಲಿ ಪ್ರವಾದಿಗಳ ವಚನವನ್ನಾಗಲಿ ತೆಗೆದುಹಾಕಲಿಕ್ಕೆ ಬಂದೆನೆಂದು ನೆನಸಬೇಡಿರಿ. ತೆಗೆದುಹಾಕಲಿಕ್ಕೆ ಬಂದಿಲ್ಲ; ನೆರವೇರಿಸುವುದಕ್ಕೆ ಬಂದಿದ್ದೇನೆ. ನಿಮಗೆ ಸತ್ಯವಾಗಿ ಹೇಳುತ್ತೇನೆ ಆಕಾಶವೂ ಭೂಮಿಯೂ ಅಳಿದು ಹೋಗುವ ತನಕ ಧರ್ಮಶಾಸ್ತ್ರವೆಲ್ಲಾ ನೆರವೇರಿದ ಹೊರತು ಅದರೊಳಗಿಂದ ಒಂದು ಸೊನ್ನೆಯಾದರೂ ಒಂದು ಗಡುಸಾದರೂ ಅಳಿದು ಹೋಗಲಾರದು (ಮತ್ತಾಯ 5:17, 18) ಎಂದು ಯೇಸು ಪ್ರಾರಂಭಿಸುತ್ತಾನೆ.

ವಾಸ್ತವವಾಗಿ, ಧರ್ಮಶಾಸ್ತ್ರವನ್ನು ತೆಗೆದುಹಾಕಲು ಅಲ್ಲ; ನೆರವೇರಿಸುವುದಕ್ಕೆ ಎಂಬ ಯೇಸುವಿನ ಮಾತು ಹಳೆಯ ಒಡಂಬಡಿಕೆಯ ಅಡಿಯಲ್ಲಿ ನಾವಿದ್ದೇವೆ ಎನ್ನುವ ಭಾವನೆಯನ್ನು ಕೊಡುತ್ತದೆ. ಕ್ರಿಸ್ತನ ಈ ವಾಖ್ಯಾನವು ಆತನ ಅಪೊಸ್ತಲರ ಬೋಧನೆಗೆ ವಿರುದ್ಧವಾಗುತ್ತದೆ. "... ಶರೀರವನ್ನು ಸಮರ್ಪಿಸಿದ್ದರಲ್ಲಿ ... ಆತನು ಸಮಾಧಾನ ಮಾಡುವವನಾಗಿ ಉಭಯರನ್ನೂ (ಯೆಹೂದಿಗಳು ಮತ್ತು ಅನ್ಯ ಜನರು) ತನ್ನಲ್ಲಿ ಒಬ್ಬ ನೂತನ ಪುರುಷನನ್ನಾಗಿ ನಿರ್ಮಿಸಿದ್ದಾನೆ" (ಎಫೆಸ 2:15). ಧರ್ಮಶಾಸ್ತ್ರದ "ಪತ್ರವನ್ನು ಕೆಡಿಸಿ" ಯೇಸು ಶಾಸನದ ಮಾರ್ಗದಿಂದ ತೆಗೆದು ಹಾಕಿದನು "ಅದನ್ನು ಶಿಲುಬೆಗೆ ಜಡಿದನು" ಎಂದು ಅಪೊಸ್ತಲರು ಮುಂದೆ ಹೇಳುತ್ತಾರೆ (ಕೊಲಸ್ಸೆ 2:14, 16).

ಮತ್ತಾಯ 5:17, 18ರಲ್ಲಿನ ಕ್ರಿಸ್ತನ ಮಾತುಗಳು ಹಳೆಯ ಒಡಂಬಡಿಕೆಯನ್ನು ಒಂದು ಒಡಂಬಡಿಕೆ, ದೇವರು ಮತ್ತು ಯೆಹೂದಿಗಳ ಮಧ್ಯದ ಒಪ್ಪಂದ ಎಂದು ಪರಿಗಣಿಸಿದಾಗ ಅದು ಅರ್ಥವಾಗುತ್ತದೆ (ನೋಡಿರಿ ಧರ್ಮೋಪದೇಶಕಾಂಡ 4:13; 5:2, 3). ಹಳೆಯ ಒಡಂಬಡಿಕೆಯು ದೇವರು ಮತ್ತು ಇಸ್ರಾಯೇಲರ ಮಧ್ಯದ ಒಂದು ಒಪ್ಪಂದ ಆಗಿದೆ. ಯೇಸು ಆ ಒಪ್ಪಂದವನ್ನು ನಾಶಮಾಡಲು ಬರಲಿಲ್ಲ (ಆಚೆಗೆ ತೂರಲು ಅಥವಾ ಅದನ್ನು ನಾಶಮಾಡಲು) ಆದರೆ ಆತನು ಅದನ್ನು "ಸಂಪೂರ್ಣಗೊಳಿಸಲು" ಬಂದನು. ಅದನ್ನು ಆತನು ಜೀವಿತ, ಮರಣ ಮತ್ತು ಪುನರುತ್ಥಾನಗಳ ಮೂಲಕ ಮಾಡಿದನು. Will Ed Warren ರವರು, "ಆತನು ಅದರ ಪ್ರವಾದನೆಗಳನ್ನು ಪೂರ್ಣಗೊಳಿಸಿದನು, ಆತನು ಧರ್ಮಶಾಸ್ತ್ರದ ಬೇಡಿಕೆಗಳನ್ನು ಪೂರೈಸಿದನು, ಮತ್ತ ಧರ್ಮಶಾಸ್ತ್ರದ ಉದ್ದೇಶಗಳನ್ನು ಸಂಪೂರ್ಣಗೊಳಿಸಿದನು ಎಂದು ಬರೆ ಯುತ್ತಾರೆ (ಗಲಾತ್ಯ 3:19; 5:14)."[11]

ಒಂದು ಸಂಪೂರ್ಣಗೊಂಡ ಒಡಂಬಡಿಕೆ/ಒಪ್ಪಂದವು ಹೆಚ್ಚುಕಾಲ ಒಡಂಬಡಿಕೆ/ ಒಪ್ಪಂದದೊಂದಿಗೆ ಕೂಡಿಕೊಂಡು ಇರದು. ಉದಾಹರಣೆಗೆ ಒಂದು ಆಸ್ತಿಯನ್ನು ನೀವು ಕೊಂಡುಕೊಳ್ಳುವುದಕ್ಕೆ ಸಂಬಂಧಪಟ್ಟಂತ ಒಪ್ಪಂದಕ್ಕೆ ಸಹಿಹಾಕಿದಾಗ ಏನಾಗುವೆಂದು ಪರಿಗಣಿಸಿ. ಒಂದು ಸಾರಿ ನೀವು ಎಲ್ಲ ಶರತ್ತುಗಳನ್ನು ಒಪ್ಪಿಕೊಂಡು ಪೂರ್ತಿಗೊಳಿಸಿದ ಮೇಲೆಯೇ (ಹಣಸಂದಾಯವನ್ನೂ ಒಳಗೊಂಡು), ಅದು ಸಂಪೂರ್ಣವಾದ ಒಪ್ಪಂದವಾಗಿ ಪರಿಣಮಿಸುತ್ತದೆ; ಇನ್ನು ಮುಂದೆ ಅದು (ಹಿಂದಿನ) ಅದಕ್ಕೆ ಒಳಗೊಳ್ಳುವದಿಲ್ಲ. ಹೀಗೆಯೇ ಯೇಸು ಧರ್ಮಶಾಸ್ತ್ರವನ್ನು ಸಂಪೂರ್ಣಗೊಳಿಸಿದಾಗ, ಅದು ದೇವಜನರೊಡನೆ ಮುದ್ರೆಯೊಡನೆ ಬಂಧಿಸಲ್ಪಟ್ಟಿತು (ನೋಡಿರಿ ಗಲಾತ್ಯ 3:16, 19, 24, 25).

ಬೆಟ್ಟದ ಮೇಲೆ ಯೇಸು ಬೋಧಿಸುತ್ತಿರುವಾಗ, ಧರ್ಮಶಾಸ್ತ್ರವು ಇನ್ನೂ ಅಸ್ತಿತ್ವದಲ್ಲಿತ್ತು. ಈ ಸ್ಥಿತಿಯಲ್ಲಿರುವ ತನಕ, ಅದರ ಬೇಡಿಕೆಗಳನ್ನು ಗೌರವಿಸಬೇಕು ಎಂದು ಕ್ರಿಸ್ತನು ತನ್ನ ಶಿಷ್ಯರಿಗೆ ಬೋಧಿಸಿದನು (ಮತ್ತಾಯ 5:19, 20). ಆತನ ಆಕ್ಷೇಪಣೆಯು ಧರ್ಮಶಾಸ್ತ್ರದ ಮೇಲಿರಲಿಲ್ಲ, ಆದರೆ ಯೆಹೂದಿಗಳ ಧರ್ಮಶಾಸ್ತ್ರದ ತಪ್ಪುಬಳಿಕೆಯೇ ಆಗಿತ್ತು.

ಮುಂದಿನ ವಚನಗಳಲ್ಲಿ ಹೃದಯದ ಭಾವನೆಗಳನ್ನು ಒಳಗೊಂಡ ಆಜ್ಞೆಗಳನ್ನು ಕೈಕೊಳ್ಳುವ ಅವಶ್ಯಕತೆಗಳಿರುವ ಅನೇಕ ಆಜ್ಞೆಗಳನ್ನು ಯೇಸು ವಿವರಿಸುತ್ತಾನೆ. ಶಾಸ್ತ್ರಿಗಳ ಮತ್ತು ಫರಿಸಾಯರಿಂದ ಬೋಧಿಸಲ್ಪಡುತ್ತಿದ್ದ ಜನರೊಡನೆ ಸಹ ಆತನು ತನ್ನ ಮಾರ್ಗಗಳನ್ನು ಹೋಲಿಸುತ್ತಾನೆ.

**ಕೊಲೆ ಮತ್ತು ಸಿಟ್ಟು (ಮತ್ತಾಯ 5:21-26)**

ಹತ್ತು ಆಜ್ಞೆಗಳಲ್ಲಿ, ಆರನೆಯದು, "ನರಹತ್ಯ ಮಾಡಬಾರದು" ಎಂದು ಹೇಳುತ್ತದೆ (ವಿಮೋಚನಕಾಂಡ 20:13; ಧರ್ಮೋಪದೇಶಕಾಂಡ 5:17). ಈ ಮೂಲ ಅವಶ್ಯಕತೆಯು ಹೊಸ ಒಡಂಬಡಿಕೆಯಲ್ಲಿ ಸಂಯೋಜಿತವಾಗಿದೆ (ರೋಮಾಪುರ 13:9), ಆದರೆ ಯೇಸು ಕೊಲೆಗೆ ಪ್ರೇರಣೆ ನೀಡುವ ಮತ್ತು ಕೊಲೆಗೆ ಪ್ರೇರೇಪಿ ಸುವತ್ತ ನಡೆಸುವ ಸಂದರ್ಭಗಳ ವಿರುದ್ಧ ಎಚ್ಚರಿಕೆಯನ್ನು ಒಳಗೊಂಡ ಮೂಲ ಒಡಂಬಡಿಕೆಯನ್ನು ವಿಸ್ತರಿಸಿದ್ದಾನೆ (ಮತ್ತಾಯ 5:22). ತಮ್ಮ ಭಿನ್ನಾಭಿಪ್ರಾಯಗಳನ್ನು ತಕ್ಷಣ ಬಗೆಹರಿಸಿ ಆತನು ಕೇಳಿಕೊಳ್ಳುವವನಾಗದಾದನೆ (ವಚನಗಳು 23-26).

**ವ್ಯಭಿಚಾರ – ಮತ್ತು ಕಾಲ (ಮತ್ತಾಯ 5:27-30)**

ಹತ್ತು ಆಜ್ಞೆಗಳಲ್ಲಿ[12] ಏಳನೆಯ ಆಜ್ಞೆಯು "ವ್ಯಭಿಚಾರಮಾಡಬಾರದು" ಎಂದು ನಿರ್ದೇಶಿಸಿದೆ (ವಿಮೋಚನಕಾಂಡ 20:14; ಧರ್ಮೋಪದೇಶಕಾಂಡ 5:18). ಈ ವಿಧಿಯು ಹೊಸ ಒಡಂಬಡಿಕೆಯಲ್ಲಿನ ಯೇಸುವಿನ ಬೋಧನೆಯ ಭಾಗವೂ ಸಹ ಆಗಿದೆ (ರೋಮಾಪುರ 13:9), ಆದರೆ ಕಾಮಾಭಿಲಾಷೆಯ ಸಂಗತಿಯನ್ನು ಸಹ ಯೇಸು ಇಲ್ಲಿ ಸೇರಿಸುವವನಾಗಿದ್ದಾನೆ (ಮತ್ತಾಯ 5:28). ಮಾಡಬಾರದ ದುರಾಷೆಗಳಿಗೆ ಪ್ರೋತ್ಸಾಹಿಸುವಂತಹ ಸಂಗತಿಗಳು ಯಾವುದಾದರೂ ಅವರ ಜೀವಿತದಲ್ಲಿ ಇರುವುದಾದರೆ ಅದನ್ನು "... ಕಿತ್ತು ಬಿಸಾಡಿ ಬಿಡು" ಎಂದು ಆತನು (ಯೇಸು) ತನ್ನ ಹಿಂಬಾಲಕರಿಗೆ ಹೇಳುವವನಾಗಿದ್ದಾನೆ (ವಚನಗಳು 29, 30).[13]

**ವಿಚ್ಛೇದನೆ – ಮತ್ತು ಕಾರಣಗಳು (ಮತ್ತಾಯ 5:31, 32)**

ಯೇಸು ವಿಚ್ಛೇದನೆಗೆ ಸಂಬಂದಪಟ್ಟಂತ ವಿಷಯಗಳ ಜೊತೆಗೆ[14] ವ್ಯಭಿಚಾರದ ಬಗೆಗೆ ಆತನು ಧರ್ಮೋಪದೇಶಕಾಂಡ 24:1-4ರ ವರೆಗಿನ ವಚನಗಳನ್ನು ವ್ಯಾಖ್ಯಾನಿಸುತ್ತಾನೆ. ಕೆಲ ಶಾಸ್ತ್ರಿಗಳು ವಿಚ್ಛೇದನವನ್ನು ಸಮರ್ಥಿಸುವುದಕ್ಕಾಗಿ "ಯಾವುದೋ ಕಾರಣಕ್ಕಾಗಿ" ಎಂದು ಧರ್ಮೋಪದೇಶಕಾಂಡ 24:1-4ನ್ನು ವ್ಯಾಖ್ಯಾನಿಸುವವರಾಗದ್ದರು, (ಮತ್ತಾಯ 19:3), ಆದರೆ ಆತ್ಮೀಕ ಕಾರಣಕ್ಕಾಗಿನ ವಿಚ್ಛೇದನವು ತಮ್ಮ ವೈವಾಹಿಕ ಪಾಲುದಾರರ ಪಾಲಿಗೆ ಇದೊಂದು ಲೈಂಗಿಕ ಅಪನಂಬಿಗಸ್ತಿಕೆ ತನವೇ[15] ಆಗಿದೆ (ವಚನ 32).[16]

**ಪ್ರಮಾಣಗಳು ಮತ್ತು ಪ್ರಾಮಾಣಿಕತೆ (ಮತ್ತಾಯ 5:33-37)**

ಮುಂದಿನ ಹೋಲಿಕೆಯು ಮದುವೆಯ ಪ್ರಮಾಣ ಮಾಡುವಿಕೆಯೇ ಆಗಿದೆ. ವಚನ 33ರಲ್ಲಿ ಯೆಹೂದಿ ಬೋಧಕರು ಯಾಜಕಕಾಂಡ 19:12; ಅರಣ್ಯಕಾಂಡ 30:2; ಮತ್ತು ಧರ್ಮೋಪದೇಶಕಾಂಡ 23:21, 23ರಂಥ ಪರಿಚ್ಛೇದಗಳನ್ನು ಹೇಗೆ ವಿವರಿಸುತ್ತಿದ್ದರು ಎಂದು ಯೇಸು ವಾಖ್ಯಾನಿಸಿದ್ದಾನೆ. ಯೆಹೂದಿಗಳು ಇತರರಿಗಾಗಿ ಕೆಲ ಪ್ರಮಾಣಗಳನ್ನು ಮತ್ತು ನಿಶೇದವಾದವುಗಳಿಗೆ ಅವಕಾಶಮಾಡಿಕೊಡುತ್ತಿದ್ದರು, ಆದರೆ ಯೇಸು ಸರಳವಾಗಿ, "ಆಣೆಯನ್ನು ಇಡಬೇಡಿರಿ" ಎಂದು ಹೇಳಿದನು (ಮತ್ತಾಯ 5:34 ನೋಡಿರಿ ಯಾಕೋಬ 5:12).[17] ಕ್ರಿಸ್ತನ ಶಿಷ್ಯರು ಇತರರು ಅವರ ವಾಕ್ಯಗಳನ್ನು ಒಪ್ಪಿಕೊಳ್ಳುವುದಕ್ಕೆ ಮನವೊಲಿಸುವಲ್ಲಿ, ಪ್ರಮಾಣಗಳ ಆಯ್ಕೆಯು ಅವಶ್ಯವಾಗಿರುವ ಸತ್ಯವನ್ನು ಹೇಳುವಲ್ಲಿ ಬಲು ನಿಶ್ಚಲರಾಗಿರಬೇಕಿತ್ತು.

**ಸಂಬಂಧ – ಮತ್ತು ಹಿಂಸೆಯನ್ನು ವಿರೋಧಿಸುವ ತತ್ವ (ಮತ್ತಾಯ 5:38-42; ಲೂಕ 6:29, 30, 34)**

ಯೇಸು ಹೇಳಿದಂತಹದನ್ನು ಆತನ ಕೆಲ ಕೇಳುಗರು ಆತನ ಮಾತನ್ನು ಸರಿಯಾಗಿ ಕೇಳಿಸಿ

ಕೊಂಡಿದ್ದಾದರೆ ಅದು ಹೆಚ್ಚಾಗಿ ಅವರನ್ನು ಆಶ್ಚರ್ಯಚಿತರಾಗುವಂತೆ ಮಾಡುವಂತದ್ದಾಗಿತ್ತು. ಹಾಗಿದ್ದಾದರೆ, ಆತನ ಕೊನೆಯ ಎರಡು ಹೋಲಿಕೆಗಳು ಅವರನ್ನು ತಡವರಿಸುವಂತೆ ಮಾಡಿತು.

ಎರಡನೆಯ ಹೋಲಿಕೆಯು "ಕಣ್ಣಿಗೆ ಕಣ್ಣೂ, ಮತ್ತು ಹಲ್ಲಿಗೆ ಹಲ್ಲು" ಎಂಬ ತತ್ವದೊಡನೆ ಸಂಬಂಧಿಸಿದ್ದು (ಮತ್ತಾಯ 5:38), ವಿಮೋಚನಕಾಂಡ 21:24, ಯಾಜಕಕಾಂಡ 24:20, ಮತ್ತು ಧರ್ಮೋಪದೇಶಕಾಂಡ 19:21ರಲ್ಲಿ ಸಿಕ್ಕುವುದಾಗಿದೆ. ಹಳೆ ಒಡಂಬಡಿಕೆಯ ಈ ಸೂಚನೆಯು ಮೂಲತಹವಾಗಿ ಅಧಿಕೃತವಾದ ತೀರ್ಪಿಗೆ ಜವಾಬ್ದಾರಿಯೆಂದು ನಿರ್ದೇಶಿಸಲ್ಪಟ್ಟಿದ್ದು; ಮಿತಿಗೊಳಿಸಿದ ಶಿಕ್ಷೆಯನ್ನು ದೂರವಿರಿಸುವದು ಇದರ ಉದ್ದೇಶವಾಗಿದೆ. ದುರ್ದೈವಶಾತ್, ಯೆಹೂದಿಗಳು ವ್ಯಕ್ತಿಗತ ಮುಯ್ಯಿತೀರಿ ಸುವದಕ್ಕಾಗಿ ಸಮಯೋಚಿತವಾದ ಬೋಧನೆಯನ್ನು ಹೊಂದಿದ್ದರು.[18]

ಯೇಸು ಪ್ರತಿಕಾರ ಮತ್ತು ವೈಯಕ್ತಿಕ ಮುಯ್ಯಿ ತೀರಿಸುವುದರ ಬಗೆಗೆ ಬೋಧಸಿದನು. ಅವಶ್ಯವಾದರೆ ದಬ್ಬಾಳಿಕೆಯಿಂದ ಕಷ್ಟಪಡವುದಕ್ಕೂ ಕೂಡ ಸಿದ್ಧರಾಗಿರುವಂತೆ, ಯೇಸು ತನ್ನ ಶಿಷ್ಯರಿಗೆ ತನ್ನ ಬಿಟ್ಟಿಹಿಡಿದಿರುವವರಿಗಾಗಿ "ಎರಡು ಮೈಲಿ ಹೋಗಲು" (ಮತ್ತಾಯ 5:41) ಆಜ್ಞಾಪಿಸಿದನು (ಮತ್ತಾಯ 5:39-42;[19] ನೋಡಿರಿ 1 ಕೊರಿಂಥ 6:7).

### ವೈರಿಗಳು ಮತ್ತು ಪ್ರೀತಿ (ಮತ್ತಾಯ 5:43-48; ಲೂಕ 6:27, 28, 33, 34, 36)

ನಂತರ ಯೇಸು ವೈರಿಗಳನ್ನು ಉಪಚರಿಸುವುದರ ಬಗೆಗೆ ಹೇಳುತ್ತಾನೆ. ಈ ವ್ಯತ್ಯಾಸಕ್ಕೆ ಮತ್ತು ಹಿಂದಿನ ವಿಷಯಕ್ಕೂ ಹತ್ತಿರವಾದ ಸಂಬಂಧವು ಇದೆ.[20]

ಧರ್ಮಶಾಸ್ತ್ರವು "ನಿನ್ನ ನೆರೆಯವನನ್ನು ಪ್ರೀತಿಸು" ಎಂದು ಆಜ್ಞೆಮಾಡುವುದಾಗಿದೆ (ಯಾಜಕಕಾಂಡ 19:18). ಎಲ್ಲಿಯವರೆಗೆ ತನ್ನ "ನೆರೆಯವರನು" ಪ್ರೀತಿಸುತ್ತಾನೋ ಅಲ್ಲಿಯವರೆಗೆ, ವೈರಿಗಳನ್ನು ದ್ವೇಷಿಸಲು ಎಲ್ಲ ಹಕ್ಕೂ ಇದೆ (ಮತ್ತಾಯ 5:43) ಹಳೆಯ ಒಡಂಬಡಿಕೆಯಲ್ಲಿ ಕಂಡು ಬರದಂತಹ ಒಂದು ಶಾಸನವನ್ನು ಯೆಹೂದಿ ಬೋಧಕರು ಅಪಾರ್ಥಮಾಡಿದ್ದರು.[21]

ಯೇಸು ನೆರೆಯರನ್ನು ಪ್ರೀತಿಸುವ ತತ್ವವನ್ನು ಹೃದಯಪೂರ್ವಕವಾಗಿ ದೃಢೀಕರಿಸಿದನು ಮತ್ತು ತನ್ನ ಹೊಸ ಒಡಂಬಡಿಕೆಯ ಭಾಗವಾಗಿ ಇದನ್ನು ಮಾಡಿದನು (ಮತ್ತಾಯ 22:39; ರೋಮಾಪುರ 13:8-10; ಗಲಾತ್ಯ 5:14; ಯಾಕೋಬ 2:8). ಆತನು ವೈರಿಗಳನ್ನು ದ್ವೇಷಿಸುವ ಸೂತ್ರದ ಬಗೆಗೆ ಬಲವಾದ ಅಸಮ್ಮತಿಯನ್ನು ಹೊಂದಿದ್ದನು. ಆತನು ತನ್ನ ಶಿಷ್ಯರಿಗೆ ತಮ್ಮ ವೈರಿಗಳನ್ನು ಪ್ರೀತಿಸಲು ಮತ್ತು ಅವರ ಬಗೆಗೆ ಪ್ರಾರ್ಥಿಸಲು, ದೇವರು ಇದ್ದ ಹಾಗೆ ಎಲ್ಲಾ ಜನರ ಅವಶ್ಯಕತೆಗಳಿಗಾಗಿ ಕಾಳಜಿ ಹೊಂದಿರಲು ಬೋಧಿಸಿದನು (ಮತ್ತಾಯ 5:45-48).[22]

## "ಆದರೆ ಯಾವಾಗ ನೀವು ..." (ಮತ್ತಾಯ 6:1-18)

ಹಿಂದಿನ ಭಾಗದಲ್ಲಿ ಅವರ ನೀತಿವಂತಿಕೆಯು "ಫರಿಸಾಯ ಮತ್ತು ಶಾಸ್ತ್ರಿಗಳನ್ನು" ಮೀರಿ ಸುವಂತದ್ದಾಗಿರಬೇಕೆಂದು ಯೇಸು ತನ್ನ ಕೇಳುಗರಿಗೆ ಎಚ್ಚರಿಸಿದನು (ಮತ್ತಾಯ 5:20). ಅನೇಕ ಶಾಸ್ತ್ರಿಗಳಲ್ಲಿ ಮತ್ತು ಫರಿಸಾಯರಲ್ಲಿನ ಒಂದು ನ್ಯೂನ್ಯತೆಯೆಂದರೆ ಅವರ ಧಾರ್ಮಿಕ ಕಾರ್ಯವು ದೇವರಿಗಿಂತ ಹೆಚ್ಚಾಗಿ ಮನುಷ್ಯರನ್ನು ಮೆಚ್ಚಿಸುವುದೇ ಆಗಿತ್ತು. ಅಂತೆಯೇ ಯೇಸು "ಜನರು ನೋಡಲಿ ಎಂದು ನಿಮ್ಮ ಧರ್ಮಕಾರ್ಯಗಳನ್ನು[23] ಅವರ ಮುಂದೆ ಮಾಡಬಾರದು, ನೋಡಿರಿ; ಹಾಗೆ ಮಾಡಿದರೆ ಪರಲೋಕದಲ್ಲಿರುವ ನಿಮ್ಮ ತಂದೆಯ ಹತ್ತಿರ ನಿಮಗೆ ಫಲ ದೊರೆಯದು" (6:1) ಎಂದು ದೇವರಿಗೆ ವಿಧೇಯರಾಗುವ ನಿಟ್ಟಿನಲ್ಲಿ ಯೋಗ್ಯ ಪ್ರೇರಣೆಯ ಮಹತ್ವವನ್ನು ಒತ್ತಿ ಹೇಳಿದನು. ತಾನೇನು ಹೇಳಬೇಕೆಂದಿರುವುದರ ಬಗೆಗೆ ಯೇಸು ಮೂರು ಉದಾಹರಣೆಗಳನ್ನು ಕೊಡುತ್ತಾನೆ.

**ದಾನಧರ್ಮ - ಕೊಡುವದು (ವಚನಗಳು 2-4)**

ಯೆಹೂದಿಗಳ ದಾನಕೊಡುವ ಅಭ್ಯಾಸದ ಬಗೆಗೆ ಯೇಸು ಮೊದಲು ಮಾತನಾಡುತ್ತಾನೆ. ಗ್ರೀಕ್ ಪದದ ಭಾಷಾಂತರವಾದ "ದಾನ" ಇದರ ಮೂಲ ಅರ್ಥ "ಕರುಣೆಯ ಕಾರ್ಯ" ಎಂದಾಗಿದೆ. ಆಂಗ್ಲಭಾಷೆಯ "ದಾನ"ವು ಬಡವರಿಗೆ ಕೊಡುವ ಧರ್ಮಕಾರ್ಯದ ಬಗೆಗೆ ಸೂಚಿಸುವುದಾಗಿದೆ. ಬಡವರಿಗೆ ಕೊಡುವದು ಪರಿಶುದ್ಧವಾದ ಕಾರ್ಯ ಎಂದು ಹಳೆಯ ಒಡಂಬಡಿಕೆಯು ಕಲಿಸುವುದಾಗಿದೆ (ಧರ್ಮೋಪದೇಶಕಾಂಡ 15:11), ಆದರೆ ಕೆಲ ಯೆಹೂದಿಗಳು ತಮ್ಮ ಕೊಡುವಿಕೆಯನ್ನು ಉತ್ಪನ್ನವಾಗಿಸಿಕೊಂಡಿದ್ದರು (ಮತ್ತಾಯ 6:2). ಯೇಸು ತನ್ನ ಹಿಂಬಾಲಕರಿಗೆ ಶಾಂತವಾಗಿ ಹಂಚಿಕೊಳ್ಳಬೇಕು ಮತ್ತು ತಾವು ಏನನ್ನು ಕೊಡುತ್ತಿದ್ದಾರೆ ಎಂಬುದು ಯಾರ ಗಮನಕ್ಕೂ ಬಾರದ ಹಾಗೆ ಕೊಡಬೇಕೆಂದು ಒತ್ತಾಯಿಸುವವನಾಗಿದ್ದಾನೆ (ವಚನಗಳು 3, 4).

ಕೆಲವರು "ಬಲಗೈ" ಮತ್ತು "ಎಡಗೈ" (ವಚನ 3), ಅದರ ಜೊತೆಗೆ "ರಹಸ್ಯಗಳು" (ವಚನ 4) ಎಂಬ ಯೇಸುವಿನ ಬೋಧನೆಗಳನ್ನು ತೆಗೆದುಕೊಂಡಿದ್ದಾರೆ, ಇದರ ಅರ್ಥ ಕ್ರೈಸ್ತರು ನಿಶ್ಚಿತವಾದಂಥವುಗಳನ್ನು ಮಾಡಲೇಬೇಕು ಅದು ಅವರು ಎಷ್ಟು ಕೊಡುತ್ತಾರೆ ಎಂದು ಯಾರೊಬ್ಬರು ತಿಳಿಯರು. ಪರಿಚ್ಛೇದದ ಈ ದೃಷ್ಯವು ಯೇಸುವಿನ ಈ ಹಿಂದಿನ ಬೋಧನೆಯಾದ "ನಿಮ್ಮ ಬೆಳಕು ಜನರ ಮುಂದೆ ಪ್ರಕಾಶಿಸಲಿ ಹೀಗಾದರೆ ಅವರು ನಿಮ್ಮ ಒಳ್ಳೆಯ ಕ್ರಿಯೆಗಳನ್ನುನೋಡಿ ..." ಎಂಬುದಕ್ಕೆ ವ್ಯತ್ಯಾಸತ್ಮಕವಾಗಿ ಕಂಡುಬರುತ್ತದೆ (ನೋಡಿರಿ 5:16).[24] J. W. McGarveyರವರು, "ಆಜ್ಞೆಗಳು ಪ್ರಚಾರವನ್ನು ನಿಶೇದಿಸುವುದಿಲ್ಲ; ಆದರೆ ಆ ಚೇತನವು ಪ್ರಚಾರದ ಆಶೆಯನ್ನು ಬಯಸುವುದಾಗಿದೆ" ಎಂದು ಬರೆದಿರುವದು ಸರಿ ಎನ್ನಿಸುವುದಾಗಿದೆ.[25]

**ಪ್ರಾರ್ಥಿಸುವುದು (ವಚನಗಳು 7-15)**

ಯೇಸುವಿನ ಎರಡನೆಯ ದೃಷ್ಟಾಂತವು ಪ್ರಾರ್ಥನೆಯ ಬಗೆಗೆ ಇದೆ. ಅವರ ಸಾರ್ವಜನಿಕ ನಾಟಕದ ಪ್ರದರ್ಶನವನ್ನು ಆತನು ತನ್ನ ಕೇಳುಗರೊಂದಿಗೆ ಹಂಚಿಕೊಂಡನು (6:5, 6).

"ಆತನು ತನ್ನ ಶಿಷ್ಯರಿಗೆ ಸಮಾಜಿಕ, ಮತ್ತು ವ್ಯಕ್ತಿಗತವಾದ ಪ್ರಾರ್ಥನೆ ಮಾಡುವುದಕ್ಕೆ ಮಾದರಿಯನ್ನು ಕಲಿಸಿಕೊಟ್ಟನು" (ವಚನಗಳು 9-13).[26] ಕ್ರಿಸ್ತನು ತೀವ್ರವಾಗಿ ಮಾತನಾಡಿದಂತೆ ಇತರರನ್ನು ಕ್ಷಮಿಸುವ ಅವಶ್ಯಕತೆಯ ಬಗೆಗಿನ ವಿಚಾರವನ್ನು ಪ್ರಚೋದಿಸುವ ಪದಗಳು ಈ ಪ್ರಾರ್ಥನೆ ನಮೂನೆಯಲ್ಲಿದ್ದು ಅದು ಕ್ಷಮಾಪಣೆಯ ಬಗೆಗಿನ ಸಾವಲನ್ನೂ ಒಳಗೊಂಡಿದೆ (ವಚನಗಳು 14, 15).

**ಉಪವಾಸ (ವಚನಗಳು 16-18)**

ಮೂರನೆಯ ಉದಾಹರಣೆಯು ಉಪವಾಸಕ್ಕೆ ಸಂಬಂಧಿಸಿದೆ. ಹಳೆಯ ಒಡಂಬಡಿಕೆಯಲ್ಲಿ ಉಪವಾಸದ ಬಗೆಗೆ ಯಾವುದೇ ನಿರ್ಧಿಷ್ಟವಾದ ಆಜ್ಞೆಯು ಇಲ್ಲ, ಆದರೆ ಯೆಹೂದಿಗಳ ಧರ್ಮಶಾಸ್ತ್ರದಲ್ಲಿ ಪಶ್ಚಾತ್ತಾಪದ ದಿನದಂದು ತನ್ನ ಆತ್ಮಗಳನ್ನು "ಕುಂದಿಸಿಕೊಳ್ಳಲು" ಹೇಳಲ್ಪಟ್ಟಿದ್ದು (ಯಾಜಕಕಾಂಡ 16:29, 31), ಈ ರೀತಿ ಮಾಡಲು ಉಪವಾಸವು ಒಂದೇ ಮಾರ್ಗವಾಗಿದೆ ಎಂದು ಕೊಂಡಿದ್ದರು (ಕೀರ್ತನೆ 35:13). ನಂತರದ ದಿನಗಳಲ್ಲಿ ಉಪವಾಸವು ರಾಷ್ಟ್ರೀಯ ವಿನಾಶದ ನೆನಪಿಗಾಗಿ ಸಂಸ್ಥಾಪಿಸಲ್ಪಟ್ಟಿತು (ಜೆಕರ್ಯ 8:19). ಯೇಸುವಿನ ಸಮಯದಲ್ಲಿ, ಫರಿಸಾಯರು ವಾರಕ್ಕೆ ಎರಡಾವರ್ತಿ ಉಪವಾಸ ಮಾಡುತ್ತಿದ್ದರು (ಲೂಕ 18:12). ಆ ದಿನಗಳಲ್ಲಿ ತಮ್ಮನ್ನು ತಾವು "ಸಂಕಟಪಡುತ್ತಿದ್ದಾರೆ" ಎಂದು ಎಲ್ಲರೂ ತಿಳಿದುಕೊಳ್ಳುವುದನ್ನು ಖಚಿತಪಡಿಸಿಕೊಳ್ಳುತ್ತಿದ್ದರು. ಯೇಸು ತನ್ನ ಕೇಳುಗರಿಗೆ "ನೀನು ಉಪವಾಸ ಮಾಡುವುದಾದರೆ, ಅದನ್ನು ಅಂತರಂಗದಲ್ಲಿ ಇಟ್ಟುಕೋ" ಎಂದು ಹೇಳಿದನು (ವಚನಗಳು 16-18).

# ಮುಕ್ತಾಯ

ಪರ್ವತ ಪ್ರಸಂಗವು ಇಂದಿಗೂ ಕೂಡಾ ಸವಾಲುದಾಯಕವಾಗಿದೆ, ಆದರೆ ಈ ಬೋಧನೆಗಳನ್ನು ಮೊದಲು ಕೇಳಿದವರ ಮೇಲಾದ ವಾಕ್ಯದ ಪ್ರಭಾವವನ್ನು ಅರಿತುಕೊಂಡವರೊಂದಿಗೆ, ಈ ಬೋಧನೆಗೆ ಚಿರಪರಿಚಿತವಾಗಿರುವಂಥ ನಮ್ಮನ್ನು ಹೋಲಿಸಲಾಗದು. ಪರಿಚ್ಛೇದದ ಯಾವುದೇ ವ್ಯಾಖ್ಯಾನದ ಮೂಲಕ ಈ ಪ್ರಸಂಗವು ಕ್ರಾಂತಿಕಾರಿಕವಾಗಿತ್ತು. ಕೇಳುಗರು ತಮ್ಮ ಜೀವನದಲ್ಲಿ ಕೇಳಿದ್ದು ಮತ್ತು ಯೇಸು ಹೇಳಿದ್ದು ಎರಡೂ ಅವರಿಗೆ ಇಷ್ಟಪಡದ ಸಂಗತಿಗಳು ಆಗಿದ್ದವು. ಯೇಸುವಿನ ಬೋಧನೆಗಳು ಲೋಕವು ಇಟ್ಟುಕೊಂಡ ಪರಿಕಲ್ಪನೆಗೆ ವಿರುದ್ಧವಾಗಿದ್ದರೂ ಇನ್ನೂ ವಿರುದ್ಧವಾಗಿವೆ.

ನಮ್ಮ ಮುಂದಿನ ಪಾಠದಲ್ಲಿ ಪ್ರಸಂಗದ ಮೇಲೆ ಸಂಕ್ಷಿಪ್ತವಾದ ಸಮೀಕ್ಷೆಯನ್ನು ಮಾಡೋಣ - ಆದರೆ ಆ ಸಮಯದವರೆಗೆ ನೀನು ಕಾಯದಿರು, ಈಗಾಗಲೇ ನೀನು ತಿಳಿದುಕೊಂಡ ಸತ್ಯಾರ್ಥಗಳನ್ನು ನಿನ್ನ ಜೀವಿತಕ್ಕೆ ಅನ್ವಯಿಸುತ್ತಾ ಮುಂದೆ ಸಾಗು. ಈ ಬೋಧನೆಗಳು ವಿಶೇಷವಾಗಿ ಆ ಸಮಯದಲ್ಲಿ ಯೇಸುವಿನ ಶಿಷ್ಯರಾದವರಿಗೆ (ಮತ್ತಾಯ 5:1, 2) - ಅದರೊಂದಿಗೆ ಅಲ್ಲಿ ಉಪಸ್ಥಿತವಿದ್ದ ಜನಸಮೂಹಕ್ಕೆ (ಮತ್ತಾಯ 7:28) ಸಂಭೋದಿತವಾಗಿದೆ - ಆದರೆ ಅವುಗಳು ನಮ್ಮ ಪ್ರಯೋಜನಾರ್ಥವಾಗಿ ಸಂರಕ್ಷಿಸಲ್ಪಟ್ಟಿವೆ. "ಆದುದರಿಂದ *ಈ ನನ್ನ ಮಾತನ್ನು* ಕೇಳಿ ಅವುಗಳಂತೆ ನಡೆಯುವವನು ಬಂಡೆಯ ಮೇಲೆ ಮನೆಯನ್ನು ಕಟ್ಟಿಕೊಂಡ ಬುದ್ದಿಯುಳ್ಳ ಮನುಷ್ಯನನ್ನು ಹೋಲುವನು" ಎಂದು ಯೇಸು ಹೇಳಿದನು (ಮತ್ತಾಯ 7:24). ಆತನ ಮಾತುಗಳನ್ನು ನಮ್ಮ ಅಧ್ಯಯದುದ್ದಕ್ಕೂ, ನಾವು ಕೇಳುತ್ತಲೇ ಬಂದಿದ್ದೇವೆ. ಅವುಗಳ ಮೇಲೆ ಕಾರ್ಯಪ್ರವೃತನಾಗಿದ್ದೀಯೋ?

---

ಟಿಪ್ಪಣಿಗಳು

[1]ಪ್ರತಿಯೊಬ್ಬ ಬರಹಗಾರನು ತನ್ನ ಪ್ರೇರೇಪಣೆಗೆ ತಕ್ಕಹಾಗೆ ಪ್ರಸಂಗದಲ್ಲಿ ಉಪಸ್ಥಿತವಿರುವ ಭಾಗವನ್ನು ಮಂಡಿಸುವವನಾಗಿದ್ದಾನೆ. ಮತ್ತಾಯ ವಿವರಣೆಯಲ್ಲಿನ ಎಲ್ಲವೂ ಅಲ್ಲವಾದರೂ ಆರು ವಚನಗಳು ಲೂಕನ ಪುಸ್ತಕದಲ್ಲಿ ಎಲ್ಲಡೆ ಕಂಡುಬರುವವುಗಳು ಆಗಿವೆ. [2]ಹೆಚ್ಚಿನ ಬೋಧಕರು ಪ್ರಸಂಗದ ಭಾಗದಲ್ಲಿ ಪದಗಳನ್ನು ಒತ್ತಿ ಹೇಳುವ ಉದ್ದೇಶದಿಂದ ಅಲ್ಪ ಪರಿವರ್ತನೆ ಮಾಡಿ ಪುನರಾವರ್ತಿಸುವ ಚಟವನ್ನು ಹೊಂದಿರುತ್ತಾರೆ. ಮತ್ತಾಯ ಮತ್ತು ಲೂಕರು ಆದರಿಂದ ವ್ಯತಿರಿಕ್ತರಾಗಿದ್ದಾರೆ, ಮತ್ತಾಯನು ಒಂದು ಬಾರಿ ಯೇಸು ಮಾಡಿದಂಥ ಸಂಗತಿಯನ್ನು ವರದಿಮಾಡಿದರೆ ಲೂಕನು (ಅದೇ ಪ್ರಸಂಗದಲ್ಲಿನ) ಯೇಸು ಮಾಡಿದ ಅದೇ ಸಂಗತಿಯಲ್ಲಿನ ಇನ್ನೊಂದನ್ನು ವರದಿ ಮಾಡುವವನಾಗಿದ್ದಾನೆ. [3]ಈಗಾಗಲೇ ಹೇಳಲ್ಪಟ್ಟವುಗಳಲ್ಲಿ, ಮತ್ತಾಯನಲ್ಲಿದ್ದಂತಹ ಕೆಲ ವಚನಗಳು ಲೂಕನಲ್ಲಿ ಕಂಡುಬರುವುದಿಲ್ಲ. ಮತ್ತಾಯನ ವಿವರಣೆಯಲ್ಲಿ ಕಂಡುಬರದ ಏಳು ವಚನಗಳೂ ಸಹ ಲೂಕನ ವಿವರಣೆಯಲ್ಲಿ ಸೂಚಿಸಲ್ಪಟ್ಟಿದೆ. [4]ಪುರಾವಣಿಯಲ್ಲಿ ಸಿಕುವ ಗಲಿಲಾಯ ಸಮುದ್ರದ ನಕಾಶೆಯನ್ನು ನೋಡಿರಿ. [5]ನಂತರದಲ್ಲಿ ಈ ಪುಸ್ತಕದಲ್ಲಿ ಸಿಕ್ಕುವ ಈ ಪಾಠ ಮತ್ತು "ಎರಡು ಮಾರ್ಗಗಳು" ಎಂಬ ಪಾಠದ ಆರಂಭದಲ್ಲಿರುವ ಓದುವ ಕಾರ್ಯದ ರೂಪರೇಶೆಯನ್ನು ನೋಡಿರಿ. [6]ಪ್ರಸಂಗದ ಅಲ್ಪ ಸಮಯದ ನಂತರದಲ್ಲಿ, ಎರಡೂ ವಿವರಣೆಗಳಲ್ಲಿ ಕಪೆರ್ನೌಮಿನಲ್ಲಿ ಯೇಸು ಶತಾಧಿಪತಿಯ ಆಳನ್ನು ಸ್ವಸ್ಥಮಾಡಿದ ಪ್ರಸಂಗವು ಇದೆ (ಮತ್ತಾಯ 8:5-13; ಲೂಕ 7:1-10). [7]ಮತ್ತಾಯ 5:1; 8:1, 5ರ ಜೊತೆ ಲೂಕ 6:17, 20; 7:1ನ್ನು ಹೋಲಿಸಿರಿ. [8]ನಿಮ್ಮ ವೈಯಕ್ತಿಕ ಅಧ್ಯಯನದಲ್ಲಿ, ಈ ಪ್ರಸಂಗದ ಎರಡು ಭಾಷಾಂತರಗಳನ್ನು ಜಾಗರೂಕತೆಯಿಂದ ಹೋಲಿಸಲು ನೀವು ಬಯಸಬಹುದು ಅವು ಹೇಗೆ ಸಮಾನವಾಗಿರಬಹುದು? ಅವು ಹೇಗೆ ಭಿನ್ನವಾಗಿರಬಹುದು? ವಿಶೇಷವಾಗಿ ಕೆಲ ಉದಾಹರಣೆಗಳನ್ನು ಗಮನಿಸಿರಿ ಲೂಕನು ಹೊಂದಿರುವಂತಹ ವಿವರಗಳು ಮತ್ತಾಯನಲ್ಲಿ ಸಿಕ್ಕುವುದಿಲ್ಲ. [9]ಮತ್ತಾಯನ ವಿವರಣೆಯಲ್ಲಿನ ಪರಲೋಕದ ಸಂತೋಷ ಮತ್ತು ಲೂಕನ ವಿವರಗಳ ಹೋಲಿಕೆ ಯು ಲೂಕನು ಸೂಚಿಸಲ್ಪಟ್ಟ "ಬಡವರು" ಮತ್ತು "ಶ್ರಿಮಂತರು" ಎಂಬುದು ಮೂಲತವಾಗಿ ಆತ್ಮೀಕ ಸ್ಥಿತಿಯನ್ನು ಸೂಚಿಸುವುದಾಗಿದೆ, ಹೊರತು ಆರ್ಥಿಕ ಅನುಪಸ್ಥಿತಿಯನ್ನಲ್ಲ. [10]ಮತ್ತಾಯ 5:13-16ದ ವಿವರವಾದ ವಿವರಣೆಗಾಗಿ, ನಂತರದಲ್ಲಿ ಈ ಪುಸ್ತಕದಲ್ಲಿ

ಸಿಕ್ಕುವ "ನೀವು ಯೋಚಿಸಿದ್ದಕ್ಕಿಂತಲೂ ಅಮೂಲ್ಯರು ನೀವಾಗಿದ್ದೀರಿ" ಮತ್ತು "ನಿಮ್ಮ ಬೆಳಕು ... ಪ್ರಕಾಶಿಸಲಿ" ಎಂಬ ಎರಡು ಪ್ರಸಂಗಗಳನ್ನು ನೋಡಿರಿ.

[11]Will Ed Warren, Class Syllabus, *The Life of Christ: The Synoptic Gospels,* Harding University, 1991, 26. [12]"Decalogue" (ಹತ್ತು ಆಜ್ಞೆಗಳು) ಇದು ಎರಡು ಗ್ರೀಕ್ ಪದಗಳಾದ ಡೆಕಾ ("ಹತ್ತು") ಮತ್ತು ಲೊಗೊ ("ಪದ") ಎಂಬುದರಿಂದ ಬಂದುದಾಗಿದೆ. ಇದರ ಅರ್ಥ "ಹತ್ತು ಪದಗಳು" ಹತ್ತು ಆಜ್ಞೆಗಳನ್ನು ಸೂಚಿಸಲು ಬಳಸಿದಂತದ್ದಾಗಿದೆ. [13]ಮತ್ತಾಯ 5:29, 30ರಲ್ಲಿ ಯೇಸು ದೇಹವನ್ನು ನಾಶಮಾಡಲು ಪ್ರಚೋದಿಸುತ್ತಿಲ್ಲ; ಅಂಥ ಕಾರ್ಯವು ದೇಹವು ದೇವರ ಆಲಯ ಎಂದು ಹೇಳುವ ಸತ್ಯವೇದಿಯ ಬೋಧನೆಯನ್ನು ನಾಶಮಾಡುವುದಾಗಿದೆ (1 ಕೊರಿಂಥ 6:19; 3:17). ದೇಹದ ಭಾಗಗಳನ್ನು ಕತ್ತರಿಸುವದು ಹೃದಯದ ಸ್ಥಿತಿಯನ್ನು ಬದಲಾಯಿಸದು (ಮತ್ತಾಯ 15:19). ಯೇಸು ಈ ಉತ್ಪ್ರೇಕ್ಷೆಯನ್ನು (ವಿವರಣೆಯನ್ನು) ತನ್ನ ವಿವರಣೆಯ ಜೊತೆ ಉಪಯೋಗಿಸಿಕೊಂಡನು. [14]ಮತ್ತಾಯ 5:31, 32 (ಮತ್ತು ಬಹುಶಃ ಆದಾಗಿರಬಹುದು) ಹಿಂದಿನ ಮೂರು ವಚನಗಳು ಅದರ ಜೊತೆ ಒಳಗೊಂಡಿರಬಹುದು. ನಾನು ಮೂರು ವಚನಗಳನ್ನು ಬೇರೆಯಾಗಿ ಪಟ್ಟಿಮಾಡಿದ್ದೇನೆ ಯಾಕೆಂದರೆ ವಚನ 32 "ಆದರೆ ನಾನು ನಿಮಗೆ ಹೇಳುವುದೇನಂದರೆ" ಎಂದು ಪ್ರಾರಂಭವಾ ಗುತ್ತದೆ. [15]NASBಯಲ್ಲಿ "ಅಪವಿತ್ರತೆ" ಎಂದಿದೆ, ಆದರೆ ಗ್ರೀಕ್ ವೇದಭಾಗದಲ್ಲಿ ಆ ಪದಕ್ಕೆ "ವ್ಯಭಿಚಾರ" ಎಂದಿದೆ (ನೋಡಿರಿ KJV). [16]ನಂತರದ ಪ್ರಸಂಗಗಳಲ್ಲಿ ಕ್ರೂಢಿಕರಿಸಲ್ಪಟ್ಟ ಈ ವಿಷಯವು ಮತ್ತಾಯ 19:3-9ರಲ್ಲಿ ವಿಸ್ತರಿಸಲಾಗಿದೆ. [17]ಇದು ನಿಷೇದಿತವಾದ ಸಾಮಾಜಿಕ ಪ್ರಮಾಣಗಳಲ್ಲ. ಸನ್ಹೆದ್ರಿನ್‌ನಿಂದ ಪ್ರಯತ್ನಿಸಿಲ್ಪಟ್ಟಾಗ, ಯೇಸು ಪ್ರಮಾಣದ ಅಡಿಯಲ್ಲಿರುವುದಾಗಿ ಉತ್ತರಿಸಿದನು (ಮತ್ತಾಯ 26:63, 64). [18]ದುರ್ದೈವಶಾತ್, ಕೆಲ ವ್ಯಕ್ತಿಗಳು ಇಂದು ತಮ್ಮ ವೈಯಕ್ತಿಕ ವೈರತ್ವವನ್ನು ಸಿದ್ಧಪಡಿಸಲು ಇನ್ನೂ ಹಳೆಯ ಒಡಂಬಡಿಕೆಯ ಬೋಧನೆಗಳನ್ನು ಬಳಸುತ್ತಿದ್ದಾನೆ. [19]ವಚನ 39ರಿಂದ 42ರವರೆಗಿನ ಪರ್ವತ ಪ್ರಸಂಗದಲ್ಲಿ ಹೆಚ್ಚಿನ ಸವಾಲುಗಳು ಇವೆ. ಯೇಸು ತನ್ನ ಜೀವಿತವನ್ನು ತೊಂದರೆಯ ಅಡಿಯಲ್ಲಿ ಇಟ್ಟದ್ದು ತತ್ವವು ಒಳಗೊಂಡಿದ್ದರ ಉತ್ತಮ ಉದಾಹರಣೆಯಾಗಿದೆ. ಹೇಗೋ, ಕೆಲ ಗುಣಗಳ ಅವಶ್ಯಕತೆಯು ಇದೆ: ಕೆಟ್ಟತನಕ್ಕೆ ಒಟ್ಟಾಗಿ ಪ್ರತಿರೋಧಿಸುವ ತತ್ವವು ತಪ್ಪಾದ ಕಾರ್ಯವನ್ನು ಪ್ರಚೋದಿ ಸುವುದಾಗಿದೆ. ಜಾಗರೂಕನಾಗಿರು, ಈ ಪರಿಚ್ಛೇದವು ತನ್ನ ಕ್ರಾಂತಿಕಾರಿ ಬೋಧನೆಯ ಸ್ವಭಾವದಿಂದ ಬಲು ಮೃದುವಾಗಿದ್ದು ಯೋಗ್ಯವಾಗಿಲ್ಲ ಎಂದು ಲಕ್ಷೀಕರಿಸದಿರಿ. [20]ಲೂಕನ ವಿವರಣೆಯು ಎರಡು ಭಾಗಗಳನ್ನು ಸೇರಿಸುವುದಾಗಿದೆ (ಲೂಕ 6:27-30, 32-36).

[21]ಹಳೆಯ ಒಡಂಬಡಿಕೆಯು ಇಸ್ರಾಯೇಲ್ಯರ ವೈರಿಗಳಿಗೆ ಅವರು ದೇವ ಜನರನ್ನು ನಡೆಸಿಕೊಂಡ ರೀತಿಗಾಗಿ ಶಿಕ್ಷೆಯನ್ನು ಕೊಡಲು ಈ ಆಜ್ಞೆಯನ್ನು ಮಾಡಿತು (ಉದಾಹರಣೆಗೆ, ನೋಡಿರಿ ಧರ್ಮೋಪ ದೇಶಕಾಂಡ 23:3-6), ಆದರೆ ಯೆಹೂದಿಗಳು ತಮ್ಮ ವೈರಿಗಳನ್ನು ದ್ವೇಷಿ ಸಬೇಕು ಎಂದು ಅದು ಬೋಧಿಸಲಿಲ್ಲ. ಅವರು "ಕೆಟ್ಟತನವನ್ನು ದ್ವೇಶಿಸಬೇಕು" (ಕೀರ್ತನೆ 97:10; ಜ್ಞಾನೊಕ್ತಿ 8:13), ಆದರೆ ಜನರನ್ನಲ್ಲ. [22]ಇಲ್ಲಿನ ಸವಾಲು ದೇವರು "ಪರಿಪೂರ್ಣ"ನಾಗಿದ್ದರಿಂದ ನಾವು "ಪರಿಪೂರ್ಣ"ರಾಗಿರ ಬೇಕು (ಮತ್ತಾಯ 5:48) ಎಂಬುದು ಅವರನ್ನು ಉದ್ದೇಶಿಸಿ ಹೇಳಲಾಗಿದೆ. ಹಾಗಿರುವುದರಿಂದ ನಮ್ಮಲ್ಲಿ ಯಾರೊಬ್ಬರೋ ಪಾಪವಿಲ್ಲದೇ ಇಲ್ಲದಿರುವುದರಿಂದಾಗಿ ಪರಿಪೂರ್ಣರಲ್ಲ (ರೋಮಾಪುರ 3:23). ಲೂಕನ ವಿವರಣೆಯು ದೇವರು "ಕರುಣೆಯುಳ್ಳವನು" ಆಗಿರುವದರಿಂದ "ಪರಿಪೂರ್ಣನಾಗಿರು" ಎಂದು ನಮಗೆ ಸೂಚಿಸುವುದಾಗಿದೆ (ಲೂಕ 6:36). ಈ ಬೋಧನೆಯು ಕರುಣೆಯ ವಿಷಯದಲ್ಲಿದ್ದ ನಾವುಗಳು ದೇವರ ಹಾಗೆ "ಪರಿಪೂರ್ಣರಾಗಿದ್ದೇವೆ" ಹಾಗಿದ್ದಲ್ಲಿ ನಾವು ನೀತಿವಂತರಿಗೂ ಹಾಗೂ ಅನೀತಿವಂತರು ಇಬ್ಬರಿಗೂ ಕರುಣೆಯನ್ನು ತೋರಿ ಸುವವರಾಗಿರಬೇಕು (ಮತ್ತಾಯ 5:45). [23]KJVಯ ಮತ್ತಾಯ 6:1ರಲ್ಲಿ "... ದಾನ ಮಾಡು"ಎಂದಿದೆ, ಆದರೆ ಒಂದು ಉತ್ತಮವಾದ ಹಸ್ತ ಪತ್ರಿಕೆಗಳಲ್ಲಿ ಈ ಪದಗುಚ್ಛವು "... ಒಳ್ಳೆಯದನ್ನು ಮಾಡು" ಎಂದಿದೆ. ವಚನ 1 ಸಾಮಾನ್ಯವಾದ ಬುದ್ಧಿವಾದವನ್ನು ಇಡುವುದಾಗಿದ್ದು; ನಂತರದ ಮುಂದಿನ ವಚನಗಳು ಆ ಬುದ್ಧಿವಾದವನುನ ದೃಷ್ಟಾಂ ತೀಕರಿಸುವವುಗಳಾಗಿದೆ. [24]ಕಾಣುವಂಥದ್ದಕ್ಕಿಂತ ಮಾಡುವುದರಲ್ಲಿ ಹೆಚ್ಚಿನ ವ್ಯತ್ಯಾಸವಿದೆ (ಮತ್ತಾಯ 5:16) ಮತ್ತು ಮಾಡುವುದರಲ್ಲಿನ ಕೆಲವುಗಳು ಕಾಣುವವುಳು ಆಗಿವೆ (ನೋಡಿರಿ 6:2, 5, 16). [25]J. W. McGarvey and Philip Y. Pendleton, *The Fourfold Gospel or A Harmony of the Four Gospels* (Cincinnati: Standard Publishing Co., 1914), 251. (Emphasis his.) [26]ವಾಸ್ತವಾಂಶದ ಪ್ರಕಾರ ಪ್ರಾರ್ಥನೆಯು ಸಾಮಾನ್ಯವಾಗಿ "ಕರ್ತನ ಪ್ರಾರ್ಥನೆ" ಎಂದು ಕರೆ ಯಲ್ಪಡುತ್ತದೆ. ನಮಗೆ ತಿಳಿದಂತೆ ನಿಜವಾಗಿಯೂ ಯೇಸು ಎಂದಿಗೂ ಆ ಪ್ರಾರ್ಥನೆಯನ್ನು ಮಾಡಲಿಲ್ಲ. ಈ ಪ್ರಾರ್ಥನೆಗಾಗಿನ ಉತ್ತಮ ಪದಪ್ರಯೋಗವು "ಮಾದರಿ ಪ್ರಾರ್ಥನೆ" ಆಗಿದೆ. ಇದು "ಶಿಷ್ಯರ ಪ್ರಾರ್ಥನೆ" ಎಂದು ಕರೆಯಬಹುದಾಗಿದೆ. ಹೆಚ್ಚಾದ ಪ್ರಾರ್ಥನೆಯು ಇನ್ನೊಂದು ಸಂದರ್ಭಗಳಲ್ಲಿ

ಪುನ ರಾವರ್ತಿತವಾಗಿದೆ (ಲೂಕ 11:2-4). ಯಾವದೇ ಯೇಸು ಕ್ರಿಸ್ತನ ಪ್ರಾರ್ಥನೆಯು ಯಾವುದೇ ಇನ್ನಿತರ ಸಂದರ್ಭದಲ್ಲಿ ಸಾರ್ವಜನಿಕ ಆರಾಧನೆಯಲ್ಲಿ ಪುನರಾವರ್ತನೆಯೆಗೊಂಡಿರುವುದಿಲ್ಲ. ಪ್ರಾರ್ಥನೆಯನ್ನು ತಿರುಗಿ ವಾಚಿಸುವದು ಯೇಸುವಿನ "ಅರ್ಥಹೀನ ಪುನರಾವರ್ತನೆಯ" ಎಂಬ ಬೋಧನೆಯನ್ನು ಉಲ್ಲಂಘಿಸಿದಂತಾಗುತ್ತದೆ (ಮತ್ತಾಯ 6:7). ಪ್ರಾರ್ಥನೆಯು ಇಂದು ಯಾವುದೇ ರೀತಿಯಲ್ಲಿ ಬಳಿಕೆಯಾಗುತ್ತಿರುವುದಾದರೆ, ಅದರಲ್ಲಿನ ಒಂದು ಪದಪುಂಜವು ಬದಲಾಗಲೇಬೇಕು. ರಾಜ್ಯ/ಸಭೆ ಈಗಾಗಲೇ ಬಂದಿರುವುದರಿಂದ ನಾವು "ನಿನ್ನ ರಾಜ್ಯವು ಬರಲಿ" ಎಂದು ಪ್ರಾರ್ಥಿಸಲಾರೆವು (ಪ್ರಚನ 10). (ಮಾರ್ಕ 9:1 ಮತ್ತು ಅಪೊಸ್ತಲರ ಕೃತ್ಯಗಳು 1:8ರಲ್ಲಿನ ಮತ್ತು ಅಪೊಸ್ತಲರ ಕೃತ್ಯಗಳು 2:1-4ರಲ್ಲಿ ಯೇಸುವಿನ ವಾಗ್ದಾನಗಳ ಹಾಗೂ ನೆರವೇರಿಕೆನ್ನು ಗಮನಿಸಿರಿ.)